# ಹ್ಯಾಂಗೆ ಬರೆದಿತ್ತೋ ಪ್ರಾಚಿನದಲ್ಲಿ

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** Singer has followed the lyrics as in Ref. 1.
4. **Note:** The wordings in Ref. 2 are slightly different. They are not considered here.

ರಾಗ: ಮೋಹನ ತಾಳ: ಛಾಪು

ಹ್ಯಾಂಗೆ ಬರೆದಿತ್ತೋ ಪ್ರಾಚಿನದಲ್ಲಿ
ಹಾಂಗೆ ಇರಬೇಕು ಸಂಸಾರದಲ್ಲಿ || ಪ ||

ಪಕ್ಷಿ ಅಂಗಳದಲ್ಲಿ ಬಂದು ಕೂತಂತೆ
ಆ ಕ್ಷಣದಲ್ಲಿ ಹಾರಿ ಹೋದಂತೆ || ೧ ||

ನಾನಾ ಪರಿಯಲ್ಲಿ ಸಂತೆ ನೆರೆದಂತೆ
ನಾನಾ ಪಂಥವ ಹಿಡಿದು ಹೋದಂತೆ || ೨ ||

ಮಕ್ಕಳಾಡಿ ಮನೆ ಕಟ್ಟಿದಂತೆ
ಆಟ ಸಾಕೆಂದು ಅಳಸಿ ಪೋದಂತೆ || ೩ ||

ವಸತಿಕಾರನು ವಸತಿ ಕಂಡಂತೆ
ಹೊತ್ತಾರೆ ಎದ್ದು ಹೊರಟು ಹೋದಂತೆ || ೪ ||

ಸಂಸಾರ ಪಾಶವ ನೀನೆ ಬಿಡಿಸಯ್ಯ
ಕಂಸಾರಿ ಪುರಂದರ ವಿಠಲ ರಾಯ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ದಾಸರು ಕೈಗೊಂಡ ನಿತ್ಯ ಯಾತ್ರೆಯಲ್ಲಿ ಮನವರಿಕೆಯಾಗಬೇಕಾದ ಮನೋಧರ್ಮ 'ಮಾಡುವವನು ನಾನು, ಮಾಡಿಸುವವನು ಹರಿ' ಎಂಬುದು; ಬಂದುದೆಲ್ಲ, ಆಗುವುದೆಲ್ಲ ಭಗವದಿಚ್ಛೆ ಎಂಬುದು. ಬದುಕಿನಲ್ಲಿ ನಾವು ಪಡೆದುಕೊಳ್ಳುವುದಲ್ಲ ನಮ್ಮ ಕರ್ಮಾನುಸಾರವಾಗಿ ಎನ್ನುವ ವಿಶ್ವಾಸ ಮೂಲಭೂತವಾದುದು. ಈ ಕರ್ಮವೆಂಬ ಅಗತ್ಯವನ್ನು ನಿವಾರಿಸುವುದು ಹರಿ ಕೃಪೆ.

**ಪ್ರಾಚೀನದಲ್ಲಿ** – ಹಿಂದಣ ಜನ್ಮಗಳಲ್ಲಿ.

**ನಾನಾ ಪಂಥವ ಹಿಡಿದು** – ಸಂತೆಗೆಂದು ನೆರೆದ ಜನರು ಸಂತೆ ಮುಗಿದ ಮೇಲೆ ತಮ್ಮ ತಮ್ಮದಾರಿ ಹಿಡಿದುಕೊಂಡು ಹೊರಡುವಂತೆ.

**ವಸತಿಕಾರನು** – ರಾತ್ರಿಯಲ್ಲಿ ತಂಗಲು ಎಡೆಯನ್ನು ಅರಸುವ ಪ್ರಯಾಣಿಕ.

**ಕಂಸಾರಿ** = ಕಂಸನ ಸಂಹಾರ ಮಾಡಿದವನು, ಕೃಷ್ಣ

**Classification:** Keerthane
**Ankita:** purandara vittala
**Location:** NA
**Category:** Tatva Jnana, Artha Bhava
**Sub-Category:** samsara, prachina, pakshi, ata, makkalu, magu, mane, sante, dari, ooru, maya
**Pravachana:** NA
**Explanation:** NA